**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ಸಂಖ್ಯೆ:ಕಸಂವಿ/05/ಸ.ಡಿ.ಪಿ.ಜಿ.ಡಿ/ಪರೀಕ್ಷೆಗಳು-2021-22,** **ದಿನಾಂಕ:14.06.2022.**

## <u>ಅಧಿಸೂಚನೆ</u>

**2021-22 ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಜ್ಯೋತಿಷ್ಯ, ಹಸ್ತಪ್ರತಿಶಾಸ್ತ್ರ, ಪಾಲಿ, ಬುದ್ದಿಸಮ್, ಯೋಗ, ಶಾಬ್ದಬೋಧ, ಹಸ್ತಸಾಮುದ್ರಿಕಶಾಸ್ತ್ರ, ಸಂಸ್ಕೃತ, ವೇದಾಂತ ಅಂಬೇಡ್ಕರ್ ಸ್ಟಡೀಸ್, ಮುಂತಾದ ವಿವಿಧ ವಿಷಯಗಳಲ್ಲಿ ನಡೆಯುವ ಸರ್ಟಿಫಿಕೇಟ್/ಡಿಪ್ಲೋಮಾ/ಅಡ್ವಾನ್ಸ್ ಡಿಪ್ಲೋಮಾ/ಪಿ.ಜಿ.ಡಿಪ್ಲೋಮಾ ತರಗತಿಗಳ ಪರೀಕ್ಷೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

| ಅಭ್ಯರ್ಥಿಗಳಿಂದ ಶುಲ್ಕ ಸಹಿತ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ: **(ಶುಲ್ಕಗಳನ್ನು <u>payment gateway</u> ಮುಖಾಂತರ ಪಾವತಿಸುವುದು)** | ಅಭ್ಯರ್ಥಿಗಳಿಂದ ವಿಳಂಬ ಶುಲ್ಕ ಸಹಿತ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ: **(ಶುಲ್ಕಗಳನ್ನು <u>payment gateway</u> ಮುಖಾಂತರ ಪಾವತಿಸುವುದು)** |
|---|---|
| **23-06-2022** | **25-06-2022** |

**<u>ಸೂಚನೆಗಳು</u>:**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಪರಿಸರದ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಹಾಗೂ 2021-22ನೇ ಶೈಕ್ಷಣಿಕ ಸಾಲಿನ ವರೆಗೆ ಸಂಸ್ಥೆಯು ಮಾನ್ಯತೆ ನವೀಕರಣ ಮಾಡಿಕೊಂಡಿರುವ ಬಗ್ಗೆ ನಕಲು ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

2. **ಪರೀಕ್ಷಾ ಶುಲ್ಕಗಳನ್ನು payment gatewayಯ ಮುಖಾಂತರ ನಿಗದಿತ ಕೊನೆಯ ದಿನಾಂಕದೊಳಗೆ ಪಾವತಿಸುವುದು.**
**<u>https://www.onlinesbi.com/sbicollect/icollecthome.htm?corpID=2933157</u>**

3. ಪರೀಕ್ಷೆ ತೆಗೆದುಕೊಳ್ಳುವ ಎಲ್ಲಾ ಅಭ್ಯರ್ಥಿಗಳ ಪರೀಕ್ಷಾ ಶುಲ್ಕವನ್ನು ಸಂಸ್ಥೆಯ ಮುಖಾಂತರ ಒಂದೇ ಡಿ.ಡಿಯಲ್ಲಿ ಕಳುಹಿಸಬೇಕು. ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಡಿ.ಡಿ ಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

4. ನಿಗದಿತ ಕೊನೆಯ ದಿನಾಂಕದ ನಂತರದಲ್ಲಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

5. ಅರ್ಜಿಗಳೊಂದಿಗೆ ಸಲ್ಲಿಸಿದ ನಾಮಾಂಕಿತ ಪಟ್ಟಿಯಲ್ಲಿ ಸಂಸ್ಥೆಯ ಹೆಸರು ಕೇಂದ್ರ ಸಂಖ್ಯೆ ಹಾಗೂ ಸಂಸ್ಥೆಯ ಸಂಕೇತ, ವಿಳಾಸ ಮತ್ತು ಅಂಚೆ ಕಛೇರಿಯ ಪಿನ್‌ಕೋಡ್ ನಂಬರ್‌ಗಳನ್ನು ಸ್ಪಷ್ಟವಾಗಿ ನಮೂದಿಸುವುದು.

6. ಪರೀಕ್ಷೆ ತೆಗೆದುಕೊಳ್ಳುವ ಎಲ್ಲಾ ಅಭ್ಯರ್ಥಿಗಳಿಂದ ಇತ್ತೀಚಿನ ಎರಡು ಭಾವಚಿತ್ರಗಳನ್ನು ಪಡೆದು ಒಂದನ್ನು ಅರ್ಜಿಗೂ ಇನ್ನೊಂದನ್ನು ಪ್ರವೇಶ ಪತ್ರಕ್ಕೂ ಲಗತ್ತಿಸಿ ಪ್ರಾಚಾರ್ಯರು ಅಥವಾ ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿಮಕಳುಹಿಸುವುದು.

7. ಶುಲ್ಕ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಸೀಲ್ದಾರ್ ಅವರಿಂದ ಪಡೆದ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ದೃಢೀಕರಿಸಿ ಕಳುಹಿಸುವುದು.ಜಾತಿ ಪ್ರಮಾಣಪತ್ರದ ನಕಲು ಪ್ರತಿಗಳನ್ನು ಸಲ್ಲಿಸದಿದ್ದಲ್ಲಿ ಪೂರ್ಣ ಶುಲ್ಕವನ್ನು ಪಾವತಿಸಬೇಕು.ಇಲ್ಲದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

8. ಜನ್ಮ ದಿನಾಂಕದ ದಾಖಲೆಯಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ನಕಲು ಪ್ರತಿಯನ್ನು ಧೃಢೀಕರಿಸಿ ಅರ್ಜಿಯ ಜೊತೆ ಲಗತ್ತಿಸಬೇಕು.

9. ಆಯಾ ವಿಷಯವಾರು ಕೋರ್ಸ್‌ಗಳ ನಿಗದಿತ ಅರ್ಹತೆಯನ್ನು ಪೂರ್ಣಗೊಳಿಸಿರುವ ಬಗ್ಗೆ ಅಂಕಪಟ್ಟಿಯ ನಕಲು ಪ್ರತಿಯನ್ನು ದೃಢೀಕರಿಸಿ ಲಗತ್ತಿಸಬೇಕು. (ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು).

10. ಹೊರ ರಾಜ್ಯದಲ್ಲಿ ಅಧ್ಯಯನ ಮಾಡಿದ ಪ್ರಮಾಣಪತ್ರವನ್ನು ನೀಡಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಪ್ರಮಾಣಪತ್ರವು ವಿಶ್ವವಿದ್ಯಾಲಯದ ಪ್ರವೇಶಾರ್ಹತೆಯ ನಿಯಮಾವಳಿಗಳಿಗೆ ಅನುಗುಣವಾಗಿದ್ದಲ್ಲಿ ಮಾತ್ರ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು.ಇಲ್ಲದಿದ್ದಲ್ಲಿ ತಿರಸ್ಕರಿಸಲಾಗುವುದು.

11. ತಾವು ಕಳುಹಿಸಿದ ನಾಮಾಂಕಿತ ಪಟ್ಟಿಯನ್ನೆ ಅಂತಿಮ ಎಂದು ಪರಿಗಣಿಸಿ ಅಂಕಪತ್ರಗಳನ್ನು ಮುದ್ರಿಸಲಾಗುವುದು. ಆದ್ದರಿಂದ ನಾಮಾಂಕಿತ ಪಟ್ಟಿಯಲ್ಲಿ ಅಕ್ಷರ ದೋಷಗಳನ್ನು ಮತ್ತು ಹೆಸರುಗಳನ್ನು ಮರುಪರಿಶೀಲಿಸಿ ಕಳುಹಿಸುವುದು ಕಡ್ಡಾಯ.ಈ ಅಧಿಸೂಚನೆಯ ಜೊತೆಗೆ ಲಗತ್ತಿಸಿರುವ 02 ನಮೂನೆಗಳನ್ನು ಭರ್ತಿಮಾಡಿ ಸಲ್ಲಿಸಬೇಕು.ನಮೂನೆ 1ರಲ್ಲಿ ಐಚ್ಛಿಕ ವಿಷಯಗಳನ್ನು ನಮೂನೆ 02ರಲ್ಲಿ ಜಾತಿವಾರು ವಿದ್ಯಾರ್ಥಿಗಳ ಶುಲ್ಕವನ್ನು ಸ್ಪಷ್ಟವಾಗಿ ನಮೂದಿಸುವುದು.(ಸಂಸ್ಥೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸುವುದು)

12. ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ ಕಡಿಮೆಯಾದಲ್ಲಿ ಅಂತಹ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಿ ಸಮೀಪದ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗುವುದು.

13. ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಎಲ್ಲಾ ಪರೀಕ್ಷಾ ಸಂಬಂಧಿ ಮಾಹಿತಿಗಳು ಕಡ್ಡಾಯವಾಗಿ ಆಂಗ್ಲ ಭಾಷೆಯಲ್ಲಿಯೆ Microsoft Excel Sheet (Font Name and Size-Cambria-12)ನಲ್ಲಿ ಇರಬೇಕು. ವಿದ್ಯಾರ್ಥಿಗಳ ಮಾಹಿತಿಯನ್ನುMicrosoft Word, Pdf, Image ನಲ್ಲಿ ಕಳುಹಿಸಬಾರದು ವಿದ್ಯಾರ್ಥಿಗಳ ಮಾಹಿತಿಯನ್ನು ksudiploma@gmail.comಈ ಇ-ಮೇಲ್ ವಿಳಾಸಕ್ಕೆ ಸಕಾಲದಲ್ಲಿ ಕಳುಹಿಸುವುದು ಮತ್ತು ಪ್ರತಿಯನ್ನು(Hard Copy)ಪರೀಕ್ಷಾ ನಿಯಂತ್ರಕರು,ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಚಾಮರಾಜಪೇಟೆ ಬೆಂಗಳೂರು-18.ಈ ವಿಳಾಸಕ್ಕೆ ಕಳುಹಿಸುವುದು ಹಾಗೂ ಮಾದರಿ ಅನುಬಂಧವನ್ನು ಅಧಿಸೂಚನೆಯೊಂದಿಗೆ ಲಗತ್ತಿಸಲಾಗಿದೆ. ಅದೇ ರೀತಿಯಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ಹಾಗೂ ಭಾಷಾ ವಿನಾಯಿತಿ ಬಯಸುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕಪಟ್ಟಿಯನ್ನು ಲಗತ್ತಿಸಿ ಅನುಬಂಧದೊಂದಿಗೆ ಸಲ್ಲಿಸುವುದು.

14. ಸಿದ್ಧಪಡಿಸಿದ ನಾಮಾಂಕಿತ ಪಟ್ಟಿಯ ಕೊನೆಯಲ್ಲಿ ಆಯಾಯ ಕೋರ್ಸ್‌ಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗಳ ಮತ್ತು ವರ್ಷಕ್ಕೆ ಅನುಗುಣವಾಗಿ ಶುಲ್ಕದ ವಿವರಗಳನ್ನು ಸರಿಯಾಗಿ ನಮೂದಿಸುವುದು.

15. ಕನಿಷ್ಠ ಶೇಕಡ 75%ರಷ್ಟು ಹಾಜರಾತಿಯನ್ನು ವಿದ್ಯಾರ್ಥಿಗಳು ಹೊಂದಿರಬೇಕಾಗಿದ್ದು,ಸಂಸ್ಥೆಯ ಮುಖ್ಯಸ್ಥರೇ ಇದನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.

**16. ತರಗತಿವಾರು ಪರೀಕ್ಷಾ ಶುಲ್ಕವನ್ನು ಈ ಕೆಳಕಂಡ ಪಟ್ಟಿಯಲ್ಲಿ ತಿಳಿಸಲಾಗಿದೆ.**

**ಪರೀಕ್ಷಾ ಶುಲ್ಕಗಳ ವಿವರ**

| ಕ್ರ.ಸಂ | ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕ | ಅರ್ಜಿಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಮೊತ್ತ |
|---|---|---|---|---|---|
| 1 | **ಸರ್ಟಿಫಿಕೇಟ್** | 220/- | 10/- | 20/- | 250/- |
| 2 | **ಡಿಪ್ಲೋಮಾ** | 270/- | 10/- | 20/- | 300/- |
| 3 | **ಪಿ.ಜಿ./ ಅಡ್ವಾನ್ಸ್ಡ್ ಡಿಪ್ಲೋಮಾ** | 320/- | 10/- | 20/- | 350/- |
| ವಿಳಂಬ ಶುಲ್ಕ 100/- ರೂಪಾಯಿ | | | | | |

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालयः
श्री चामराजेन्द्र संस्कृत महाविद्यालयस्य परिसर:
पम्पमहाकविमार्गः, चामराजपेटे, बेङ्गलूरु – ५६००१८.

ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ರ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕಗಳ ವಿವರ

| ಕ್ರ.ಸಂ | ಪರೀಕ್ಷಾ ಶುಲ್ಕ | ಪರೀಕ್ಷಾ ಶುಲ್ಕ | ಅರ್ಜಿಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಮೊತ್ತ |
|---|---|---|---|---|---|
| 1 | ಸರ್ಟಿಫಿಕೇಟ್ | 110/– | 5/– | 10/– | 125/– |
| 2 | ಡಿಪ್ಲೋಮಾ | 135/– | 5/– | 10/– | 150/– |
| 3 | ಪಿ.ಜಿ./ ಅಡ್ವಾನ್ಸ್ಡ ಡಿಪ್ಲೋಮಾ | 160/– | 5/– | 10/– | 175/– |
| ವಿಳಂಬ ಶುಲ್ಕ **100/–** ರೂಪಾಯಿ | | | | | |

ಆದೇಶದ ಮೇರೆಗೆ,

MB 14/06/22
ಪರೀಕ್ಷಾ ನಿಯಂತ್ರಕರು